ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.149/2025

| | | | |
|---|---|---|---|
| ಹೆಸರು | : | ರಾಜಣ್ಣ | ಸಿ .ಡಬ್ಲ್ಯೂ :1 |
| ತಂದೆ ಹೆಸರು | : | ಲೇಟ್ ಚನ್ನಿಗರಾಮಯ್ಯ | ಪಿ .ಡಬ್ಲ್ಯೂ :1 |
| ವಯಸ್ಸು | : | 46 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಬೆಲವತ್ತ | |

ಸಾಕ್ಷಿಯನ್ನು ದಿಃ 23-03-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಮೃತ ಅನಿಲ್ ಕುಮಾರ್ ನನ್ನ ತಂಗಿಯ ಮಗ . ಆರೋಪಿತರು ಯಾರೆಂದು ಗೊತ್ತಿಲ್ಲ . ದಿಃ 18-01-2025 ರಂದು ಸಂಜೆ 5.30 ಸಮಯದಲ್ಲಿ ಆರೋಪಿತರು ನಮ್ಮ ಮನೆಯ ಬಳಿ ಬಂದು ನನ್ನ ತಂಗಿಯ ಮಗ ಅನಿಲ್ ಕುಮಾರನ್ನು ನಿಟ್ಟೂರಿಗೆ ಹೋಗಿ ಬರುತ್ತೇನೆ ಎಂದು KA-06-HV-0394 ಸಂಖ್ಯೆಯ ದ್ವಿ ಚಕ್ರ ವಾಹನದಲ್ಲಿ ಕರೆದುಕೊಂಡು ಹೋದರು . 10 ನಿಮಿಷಗಳ ನಂತರ ಚಾಸಾ -3 ರವರು ನನ್ನ ತಂಗಿಗೆ ಕರೆ ಮಾಡಿ ಕಲ್ಲೇಶ್ವರ ದೇವಸ್ಥಾನದ ತಿರುವಿನ ಬಳಿ ಅಪಘಾತವಾಗಿ ನಿಮ್ಮ ಮಗ ಅನಿಲ್ ಕುಮಾರ್ ರವರಿಗೆ ಪೆಟ್ಟುಗಳಾಗಿವೆ ಎಂದು ತಿಳಿಸಿದರು . ಅಪಘಾತದಲ್ಲಿ ಆತನಿಗೆ ತಲೆಗೆ , ಬಲಭುಜಕ್ಕೆ ಪೆಟ್ಟಾಗಿತ್ತು , ಮೂಗಿನಲ್ಲಿ ಮತ್ತು ಕಿವಿಯಲ್ಲಿ ರಕ್ತ ಬರುತ್ತಿದೆ ಎಂದು ತಿಳಿಸಿದರು . ನಾು ಸ್ಥಳಕ್ಕೆ ಹೋಗಿ ಅನಿಲ್ ಕುಮಾರ್ ರವರನ್ನು ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಅಲ್ಲಿ ಚಿಕಿತ್ಸೆ ಸಾಧ್ಯವಿಲ್ಲವೆಂದು ಹೇಳಿದ ಕಾರಣ ತುಮಕೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು . ಅಲ್ಲಿಯೂ ಸಹಾ ಚಿಕಿತ್ಸೆ ಸಾಧ್ಯವಿಲ್ಲವೆಂದು ಮತ್ತು ಬೆಂಗಳೂರಿಗೆ ಕರೆದುಕೊಂಡು ಹೋಗಬೇಕೆಂದು ಹೇಳಿದರು ನಮ್ಮ ಬಳಿ ಹಣ ವಿರದಿದ್ದ ಕಾರಣ ತುಮಕೂರಿನ ಸಿದ್ದಗಂಗಾ ಆಸ್ಪತ್ರೆಗೆ ದಾಖಲಿಸಿದೆವು . ಮೂರು ದಿನಗಳು ಅಲ್ಲಿ ದಾಖಲಿಸಿಕೊಂಡು ನಂತರ ವೈದ್ಯರು ಮುಂದುವರೆದ ಚಿಕಿತ್ಸೆ ಸಾಧ್ಯವಿಲ್ಲವೆಂದು ಬೆಂಗಳೂರಿಗೆ ಕರೆದುಕೊಂಡು ಹೋಗಬೇಕೆಂದು ಹೇಳಿದರು , ಆ ನಂತರ ನಾವು ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಗೆ ದಾಖಲಿಸಿದೆವು . ದಿಃ 24-01-2025 ರಂದು ಸಂಜೆ 6.45 ರ ಸಮಯದಲ್ಲಿ ಅನಿಲ್ ಕುಮಾರ್ ರವರು ಚಿಕಿತ್ಸೆ ಫಲಕಾರಿಯಾಗದೆ ಮರಣ ಹೊಂದಿದ್ದಾರೆ .

ಸಿದ್ದಗಂಗಾ ಆಸ್ಪತ್ರೆಗೆ ಅನಿಲ್ ಕುಮಾರ್ ರವರನ್ನು ದಾಖಲಿಸಿದ ದಿನ ಗುಬ್ಬಿ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 ಎಂದು ಸಾಕ್ಷಿ ಸಹಿಯನ್ನು ನಿಪಿ -1 (ಎ) ಎಂದು ಗುರುತಿಸಲಾಯಿತು.

ದೂರು ನೀಡಿದ ಮಾರನೇ ದಿನ ಬೆಳಗ್ಗೆ 6.00 ಗಂಟೆ ಪೊಲೀಸರು ಅಪಘಾತ ಸ್ಥಳಕ್ಕೆ ಮಹಜರು ಮಾಡಲು ಬಂದಿದ್ದರು . ಮಹಜರು ಸಮಯ ಚಾಸಾ -2 ಮತ್ತು 3 ರವರು ಸಹಾ ನನ್ನ ಜೊತೆ ಸ್ಥಳದಲ್ಲಿ ಹಾಜರಿದ್ದರು .

ಸಾಕ್ಷಿಗೆ ಸ್ಥಳ ಮಹಜರ್ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 ಎಂದು ಸಾಕ್ಷಿ ಸಹಿಯನ್ನು ನಿಪಿ -2 (ಎ) ಎಂದು ಗುರುತಿಸಲಾಯಿತು.

ಮಹಜರು ಸಮಯ ಪೊಲೀಸರು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲ . ಮೇಲೆ ಹೇಳಿದಂತೆ ಆರೋಪಿತರು ನನ್ನ ತಂಗಿಯ ಮಗನನ್ನು ಕರೆದುಕೊಂಡು ಹೋದ ದ್ವಿ ಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ದ್ವಿ ಚಕ್ರ ವಾಹನದ ಎರಡು ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ್ದಾರೆ . ಭಾರತ ಸಾಕ್ಷ್ಯ ಅಧಿನಿಯಮ ಕಲಂ 63 (4)ಸಿ ರಡಿಯಲ್ಲಿ ಪ್ರಮಾಣ ಪತ್ರವನ್ನು ಸೂಕ್ತ ರೀತಿಯಲ್ಲಿ ಸಲ್ಲಿಸಿರುವ ಕಾರಣ ಕಾರಣ ಛಾಯಾಚಿತ್ರಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು . ಆರೋಪಿತರಿಂದಲೇ ಈ ಅಪಘಾತ ನಡೆದಿದೆ . ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ . ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

<u>ಪಾಟೀಸವಾಲುಃ ಸ ಸ ಅ ರವರಿಂದಃ-</u>

ದಿಃ 20-01-2025 ರಂದು ಪೊಲೀಸರು ಬೆಳಗ್ಗೆ 8.00 ರಿಂದ 9.00 ಗಂಟೆ ಅವಧಿಯಲ್ಲಿ ಚಾಸಾ -2 ರವರು ತೋರಿಸಿದ ಸ್ಥಳದಲ್ಲಿ ನಿಪಿ -2 ರಂತೆ ಮಹಜರು ಮಾಡಿದ್ದಾರೆ ಎಂದರೆ ಸರಿ . ಆ ಸಮಯ ಸ್ಥಳದಲ್ಲಿ KA-06-HV-0394 ಸಂಖ್ಯೆಯ ಕೆ ಟಿ ಎಂ ದ್ವಿ ಚಕ್ರ ವಾಹನವನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿದ್ದಾರೆ ಎಂದರೆ ಸರಿ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ . ಠಾಣೆಯಲ್ಲಿ ನಿಪಿ -2 ನ್ನು ತಯಾರಿಸಲಾಗಿದ್ದು ಅಲ್ಲಿಯೇ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಕೈ ಬರವಣಿಗೆಯಲ್ಲಿದೆಯೋ ಅಥವಾ ಬೆರಳಚ್ಚು ಮಾಡಲಾಗಿದೆಯೋ ಎಂದರೆ ನನಗೆ ಗೊತ್ತಿಲ್ಲ . ಇದೇ ಮೊದಲ ಬಾರಿಗೆ ಆರೋಪಿತರನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆಯ ಬಳಿಗೆ ಬಂದು ಆರೋಪಿತರು ನನ್ನ ತಂಗಿಯ ಮಗನನ್ನು ಕರೆದುಕೊಂಡು ಹೋದಾಗ ಆರೋಪಿತರ ಹೆಸರು ವಿಳಾಸ ಗೊತ್ತಿರಲಿಲ್ಲ, ಆ ನಂತರ ತಿಳಿಯಿತು . ದೂರನ್ನು ರಮೇಶ್ ಎಂಬುವವರ ಬಳಿ ನಾನೇ ಬೆರಳಚ್ಚು ಮಾಡಿಸಿದ್ದೇನೆ . ದೂರು ಬೆರಳಚ್ಚು ಮಾಡಿಸುವಾಗ ಆರೋಪಿತರ ಹೆಸರು ಸಿದ್ದೇಶ್ ಎಂದು ನನಗೆ ಗೊತ್ತಿರಲಿಲ್ಲ .

ಅಶೋಕ್ ಮತ್ತು ಅನಿಲ್ ಕುಮಾರ್ ರವರು ಹತ್ತಿರದ ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ . ಆರೋಪಿತರು ಅಶೋಕ್ ರವರ ಅಕ್ಕನ ಗಂಡ ಎಂದರೆ ನನಗೆ ಗೊತ್ತಿಲ್ಲ . ಅಶೋಕ್ ರವರ ಬಳಿ ನನ್ನ ತಂಗಿಯ ಮಗ ಅನಿಲ್ ಕುಮಾರ್ ರವರು ದ್ವಿ ಚಕ್ರ ವಾಹನವನ್ನು ಪಡೆದುಕೊಂಡು ತಾನೇ ಚಲಾಯಿಸಿ ದೇವಸ್ಥಾನದ ತಿರುವಿನಲ್ಲಿ ಸ್ಕಿಡ್ ಆಗಿ ಬಿದ್ದಿದ್ದಾರೆ ಆದುದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ , ಸಾಕ್ಷಿಯು ಅನಿಲ್ ಕುಮಾರ್ ರವರನ್ನು ದ್ವಿ ಚಕ್ರ ವಾಹನದಲ್ಲಿ ಮನೆಯಿಂದ ಕರೆದುಕೊಂಡು ಹೋಗಿದ್ದಾರೆ ಎಂದು ತಿಳಿಸಿದ್ದಾರೆ . ಒಂದು ವೇಳೆ ನಾನು ಹೇಳುವಂತೆ ಆರೋಪಿತರೇ ವಾಹನ ಚಲಾಯಿಸಿದ್ದಲ್ಲಿ ಮತ್ತು ಈ ಅಪಘಾತ ಮಾಡಿದ್ದಲ್ಲಿ ಅವರಿಗೂ ಸಹಾ ಪೆಟ್ಟುಗಳಾಗುತ್ತಿದ್ದವು ಎಂದರೆ ಸಾಕ್ಷಿಯು ಅವರಿಗೂ ಸಹಾ ಕಾಲಿಗೆ ಪೆಟ್ಟಾಗಿತ್ತು , ಚಿಕಿತ್ಸೆ ಪಡೆದಿದ್ದಾರೆ ಎಂದು ತಿಳಿಸಿದ್ದಾರೆ . ಈ ಅಪಘಾತಕ್ಕೆ ಸಂಬಂಧಿಸಿ ಈಗಾಗಲೇ ಅಪಘಾತದ ಪರಿಹಾರ ಪಡೆದಿದ್ದೇವೆ ಎಂದರೆ ಸರಿ . ಪೊಲೀಸರು ದೂರು ಪಡೆದುಕೊಂಡ ನಂತರ ಪರಿಶೀಲನೆ ನಡೆಸಿದಾಗ ವಾಹನ ಚಲಾಯಿಸುತ್ತಿದ್ದ ಅನೀಲ್ ಕುಮಾರ್ ರವರಿಗೆ ಚಾಲನ ಪರವಾನಗಿ ಇರದಿದ್ದ ಕಾರಣ ಆರೋಪಿತರನ್ನು ಠಾಣೆಗೆ ಕರೆಸಿಕೊಂಡು ಅವರ ಚಾಲನಾ ಪರವಾನಗಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅಪಘಾತದ ಪರಿಹಾರ ಪಡೆಯುವ ಸಲುವಾಗಿ ಪೊಲೀಸರೊಡನೆ ಶಾಮೀಲಾಗಿ ಆರೋಪಿತರ ವಿರುದ್ದ ಸುಳ್ಳು ವಿವರಗಳ ದೂರು ನೀಡಿದ್ದೇನೆ , ಆರೋಪಿತರ ತಪ್ಪಿನಿಂದ ಯಾವುದೇ ಅಪಘಾತ ನಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವಿವರ ತಿಳಿದಿಲ್ಲ , ಅನಿಲ್ ಕುಮಾರ್ ರವರು ನನ್ನ ತಂಗಿಯ ಮಗನಾಗಿರುವ ಕಾರಣ ಅವರಿಗೆ ಅಪಘಾತದ ಪರಿಹಾರ ದೊರೆಯಲಿ ಎಂಬ ಕಾರಣಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.